ಮಂಗಸೂಳಿ ಕ್ಷೇತ್ರ ದರ್ಶನ
ಮತ್ತು
ಶ್ರೀ ಮಲ್ಲಯ್ಯನ ಚರಿತ್ರೆ



ಲೇಖಕರು : ಸೌ॥ ಅನ್ನಪೂರ್ಣ ಬೆನ್ನಳ್ಳಿ

॥ ಓಂ ನಮಃ ಶಿವಾಯ ॥

ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿಗೆ ಸೇರಿದ ಮಂಗಸೂಳಿ ಗ್ರಾಮವು ಕರ್ನಾಟಕದ ಜಾಗೃತ ಪರಂಪರೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದ ವಾಸಿಯೇ '' ಶ್ರೀ ಮಲ್ಲಯ್ಯ '' ಕರ್ನಾಟಕದವರು '' ಶ್ರೀ ಮಲ್ಲಯ್ಯ '' ನೆಂದೂ ಮಹಾರಾಷ್ಟ್ರದವರು '' ಶ್ರೀ ಖಂಡೋಬಾ '' ಎಂದೂ ಕರ್ನಾಟಕ ಮಹಾರಾಷ್ಟ್ರಗಡಿಯಲ್ಲಿ ವಾಸಿಸುವವರು '' ಶ್ರೀ ಮಾರ್ಕಂಡೇಯ '' ನೆಂದೂ ಮತ್ತು '' ಶ್ರೀ ಮಲ್ಹಾರಿ / ಮಾರ್ತಂಡ '' ನೆಂದೂ ಕರೆಯುವದುಂಟು. ಅದರಂತೆ ಶ್ರೀ ಮಲ್ಲಯ್ಯನ ಪತ್ನಿಯನ್ನು '' ಗಂಗವ್ವ'' ''ಮಾಳವ್ವ''/ '' ಮಾಳಸಾ '' ಎಂಬ ಹೆಸರಿನಂದಲೂ ಕರೆಯುತ್ತಾರೆ.

ಹೀಗೆ ಶಿವ-ಪಾರ್ವತಿಯರು ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಹೆಸರಿನಿಂದ ಅನಾದಿಕಾಲದಿಂದಲೂ ಕರೆಯಲ್ಪಟ್ಟಿದ್ದಾರೆ. ಎಲ್ಲ ನದಿಗಳೂ ಸಾಗರವನ್ನೇ ಸೇರುವಂತೆ ಎಲ್ಲ ಹೆಸರಿನಿಂದ ಎಲ್ಲ ಕ್ಷೇತ್ರಗಳಲ್ಲಿ ಪೂಜಿಸಿಕೊಳ್ಳುವ, ಕರೆಯಿಸಿಕೊಳ್ಳುವ ದೇವ-ದೇವತೆಯರ ಬಗ್ಗೆ ಸ್ವಲ್ಪವೇ ಅಭ್ಯಾಸಿಸಿದರೂ ಸಾಕು. ಅಲ್ಲಿರುವವರು ಶಿವ-ಪಾರ್ವತಿಯರೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದೇ ರೀತಿಯಲ್ಲಿ '' ಮಂಗಸೂಳಿ '' ಯ ಐಹಿತ್ಯವೇನೆಂದು ತಿಳಿಯಲಿಚ್ಛಿಸಿದಾಗ -

ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕಿಗೆ ಸೇರಿದ ಒಂದು ಗ್ರಾಮ. "ವಂಟಮೂರಿ ". ಆಗಿನ ಸಂಸ್ಥಾನಾದೀಶರ ಆಡಳಿತಕ್ಕೆ ಒಳಪಟ್ಟದ್ದರಿಂದ ವಂಟಮೂರಿಯನ್ನು " ವಂಟಮೂರಿ ಸಂಸ್ಥಾನ" ವೆಂದೇ ಕರೆಯುತ್ತಿದ್ದರು. ಆದರೆ ಅಂದಿನ ವಂಟಮೂರಿ ಇಂದಿಲ್ಲ. ಘಟಪ್ರಭಾ ನದಿಗೆ ಹಿಡಕಲ್ ಬಳಿ ಸೇತುವೆಯನ್ನು ಕಟ್ಟಿದಾಗ ಈ " ಸಂಸ್ಥಾನ ವಂಟಮೂರಿ " ಜಲಾಶಯದ ಪ್ರದೇಶದಲ್ಲಿ ಉಳಿದು ತನ್ನ "ಸಂಸ್ಥಾನ" ಪದವಿಯನ್ನೂ ಹಾಗೂ ತನ್ನ " ಮೂಲ " ಸ್ಥಾನವನ್ನೂ ಕಳೆದುಕೊಂಡಿದೆ. ಸ್ಥಾನಾಂತರಗೊಂಡ ಇಂದಿನ ವಂಟಮೂರಿ " ಸುತಗಟ್ಟಿ ಗುಡ್ಡ " ವೆಂದು ಕರೆಯಿಸಿಕೊಳ್ಳುವ ಪ್ರದೇಶದಲ್ಲಿ ನೆಲೆಯೂರಿದೆ. ಇರಲಿ.

ಸಂಸ್ಥಾನ - ವಂಟಮೂರಿಯಲ್ಲಿಯ ಒಂದು ವೀರಶೈವರ ದೇಸಾಯಿ ಮನೆತನ. ಈ ಮನೆತನ ಸಕಲ ಸದ್ಗುಣಗಳ ತಾಣ. ಸಕಲ ಸಂಪತ್ ಭರಿತ ನೆಲೆ. ಮನೆತನದ ಹಿರಿಯ - ಶ್ರೀಬಸವ ಪ್ರಭು ದೇಸಾಯಿ ಹೆಸರಿಗೆ ತಕ್ಕಂತೆ ಸದಾಚಾರಿಯೂ, ಸಾತ್ವಿಕರೂ, ಸದ್ಗುಣಿಯೂ, ಧರ್ಮಾಭಿಮಾನಿಯೂ, ದಯಾಳುವೂ, ಉದಾರಿಯೂ, ಒಳ್ಳೇ ಪ್ರಭಾವಿಯೂ ಆಗಿದ್ದರು. ಆ ಕಾಲಕ್ಕೆ ವಿಜಾಪೂರದಲ್ಲಿ ಆದಿಲ್‌ಶಾಹಿ ರಾಜರ ಆಡಳಿತವಿತ್ತು. ಎಲ್ಲ ರಾಜರಂತೆ ಆದಿಲ್‌ಶಾಹಿಯೂ ಸಾಮ್ರಾಜ್ಯ ವಿಸ್ತರಣಾಪೇಕ್ಷೆಯುಳ್ಳವನಾದಾಗ, ಈ ವಂಟಮೂರಿ ಸಂಸ್ಥಾನದ ಶ್ರೀ ದೇಸಾಯಿ ಮನೆತನದ ಪ್ರಮುಖರ ಮೇಲೆ ಆದಿಲ್‌ಶಾಹಿಯ ದೃಷ್ಟಿ ಹರಿಯಿತು. ಸಕಲ ಸಂಪತ್ ಭರಿತವಾದ ಈ ಸಂಸ್ಥಾನದ ಪ್ರಮುಖರಾದ ವ್ಯಯಕ್ತಿಕ ಹೆಸರಿಗಿಂತಲೂ " ವಂಟಮೂರಿ ದೇಸಾಯಿ " ಎಂದೇ

ಪ್ರಸಿದ್ಧಿಯಾದ ದೇಸಾಯಿಯರನ್ನು ಅವರ ಧರ್ಮಾಭಿಮಾನ ಸಹಿಸದ ಆದಿಲ್‌ಶಾಹಿ, 'ಬಂಡುಖೋರ ದೇಸಾಯಿ' ಎಂದು ಗೃಹಿಸಿ ಬಂದಿಸಿದನು ಮತ್ತು



ಅವರನ್ನು ನಳದುರ್ಗದ ಬಂದೀಖಾನೆಯಲ್ಲಿಟ್ಟನು. ಆದಿಲ್‌ಶಾಹಿಯ, ಆಕಸ್ಮಿಕ ಈ ಕೃತ್ಯದಿಂದ ಬಹಳಷ್ಟು ನೊಂದುಕೊಂಡ ಸಾತ್ವಿಕ ಸದ್ಗುಣಿ ದೇಸಾಯಿಯವರಿಗೆ ದೇವರನ್ನು ಮೊರೆ ಹೋಗದೆ ಗತ್ಯಂತರವಿರಲಿಲ್ಲ. ವಂಟಮೂರಿಗೂ

ನಳದುರ್ಗಕ್ಕೂ ಬಹಳ ಅಂತರ. ತನ್ನ ಸಂಸ್ಥಾನದಿಂದ ಯಾವ ಸುದ್ದಿಯೂ ತಿಳಿಯದ ಸ್ಥಳ. ಹೀಗಿರುವಾಗ ಹತಾಶನಾಗಿ ಬಂದೀಖಾನೆಯಲ್ಲಿ ದೇವರನ್ನೇ ಪ್ರಾರ್ಥಿಸುತ್ತ ಕಾಲ ಕಳೆಯುವ ಪರಸ್ಥಿತಿಯಾಗಿದ್ದಿತು. ಜೀವಿಸಿರುವದು ಬೇಸರವೆನಿಸುತ್ತಿರುವ ಕಾಲ ಅವರಿಗೆ ಉಂಟಾಗಿತ್ತು. ಹೀಗೆ ಕೆಲ ದಿನ ಕಾಲಕಳೆಯುತ್ತಿರುವಾಗ ಒಂದು ಸಂಜೆ ' ಏಳು ಕೋಟಿ ಉಘೆ ', ಏಳು ಕೋಟಿ ಉಘೆ ಎಂಬ ಜಯ ಜಯಕಾರಕ ಶಬ್ದಗಳು ದೇಸಾಯಿಯವರನ್ನು ಆಕರ್ಷಿಸಿದವು. ಶಬ್ದ ಬಂದ ಕಡೆಗೆ ಬಂದೀಖಾನೆಯ ಕಿಡಕಿಯಿಂದ ದೃಷ್ಟಿ ಹಾಯಿಸಿದಾಗ, ನಳದುರ್ಗದ ಜನರು ' ಶ್ರೀ ಮಲ್ಲಯ್ಯನ ' ಪಾಲಕಿ ಹೊತ್ತು ಜಯ ಜಯಕಾರ ಹಾಕುತ್ತ ಹೊರಟಿರುವದು ಕಂಡಿತು. ಮೊದಲೇ ದೈವ ಭಕ್ತರಾದ ದೇಸಾಯರಿಗೆ ಹೊರಗೆ ನಡೆದ ಈ ದೇವಸ್ತುತಿ ಮನಸ್ಸಿನಾಳಕ್ಕಿಳಿಯಿತು. ಆ ಕ್ಷಣದಿಂದಲೇ ಶ್ರೀ ಮಲ್ಲಯ್ಯನ ಪ್ರಾರ್ಥನೆ ಪ್ರಾರಂಭವಾಯಿತು.

ಶ್ರೀ ಮಲ್ಲಯ್ಯನನ್ನೇ ಧ್ಯಾನಿಸುತ್ತ ಕುಳಿತ ದೇಸಾಯರಿಗೆ ಅಂದು ರಾತ್ರಿ ದೇವದರ್ಶನವಾದ ರೀತಿಯಲ್ಲಿ ಕನಸು ಕಾಣುತ್ತಿದ್ದಾಗ, 'ನೀನೀ ಬಂಧನಕ್ಕೆ ಯೋಗ್ಯನಲ್ಲ. ದೈವಭಕ್ತನಾದ ನಿನಗೆ ಬಂಧನದ ಹೊರಗೆ ಬಹಳಷ್ಟು ಕೆಲಸವಿದೆ. ರಾತ್ರಿಯ ಎರಡನೇ ಹಂತದಲ್ಲಿ ನಿನ್ನ ಬಂಧನ ಕಳಚುವದು. ಬಂದೀಖಾನೆಯ ಬಾಗಿಲು ಕೂಡ ತೆಗೆದುಕೊಂಡಿರುತ್ತದೆ. ಕಾವಲುಗಾರರೆಲ್ಲರೂ ನಿದ್ರಾವಶರಾಗಿರುತ್ತಾರೆ. ಬಂದೀಖಾನೆಯ ಹೊರಗೆ ಅಲ್ಪಾಂತರದಲ್ಲಿ ಕುದುರೆ ಸವಾರನೊಬ್ಬ ನಿನಗಾಗಿ ಕಾಯುತ್ತಿರುತ್ತಾನೆ. ಅವನ ಸಹಾಯ ಪಡೆದು ನೀನು ಹೋಗು, ನಿನಗೆ ಮಲ್ಲಯ್ಯನ ದರ್ಶನವಾಗುವದು' ಎಂಬುದಾಗಿ ಕನಸು ಕಂಡ ದೇಸಾಯರು ರಾತ್ರಿಯ ಎರಡನೇ ಹಂತಕ್ಕಾಗಿ ಕಾತುರರಾಗಿ ಕುಳಿತುಕೊಳ್ಳುತ್ತಾರೆ.

ಕನಸು ಕಂಡಂತೆ ಬಂಧನವು ಕಳಚುವದು. ಬಾಗಿಲು ಯಾವ ಆತಂಕವಿಲ್ಲದೆ ತೆರೆಯುವದು. ಕಾವಲುಗಾರರು ನಿದ್ರಾಧೀನರಾಗಿದ್ದನ್ನು ಕಂಡರು ಮತ್ತು ಮುಂದೆ ನಡೆದರು. ಅಲ್ಪಾಂತರದಲ್ಲಿ ಕನಸಿನಲ್ಲಿ ಕಂಡಂತೆ ಕುದುರೆ ಸವಾರನೊಬ್ಬ ದೇಸಾಯರ ದಾರಿ ನೋಡುತ್ತಿದ್ದನು. ದೇಸಾಯರು ಸಮೀಪಿಸುತ್ತಿದ್ದಂತೆಯೇ ಕುದುರೆ ಮೇಲೆ ಹತ್ತಬೇಕೆಂದೂ ಹಿಂದಿರುಗಿ ನೋಡಬಾರದೆಂದೂ ಸೂಚಿಸಿ ತಾನು ಕುದುರೆ ಹತ್ತಿ ತನ್ನ ಹಿಂದೆ ದೇಸಾಯರನ್ನು ಕೂಡ್ರಿಸಿಕೊಂಡು ಪ್ರಯಾಣ ಬೆಳೆಸುತ್ತಾನೆ.


ತನಗೂ ಈ ಕುದುರೆ ಸವಾರನಿಗೂ ಏನು ಸಂಬಂಧ ? ಈ ಕುದುರೆ ಮತ್ತು ಸವಾರ ಯಾರು ? ನನಗೆ ಕನಸು ಬಿದ್ದದ್ದು, ನಾನೀ ರೀತಿ ಬಂದೀಖಾನೆಯಿಂದ ಯಾವ ಅಡೆತಡೆ ಇಲ್ಲದೆ ಹೊರಬರುವದು, ಈ ಕುದುರೆ ಸವಾರನಿಗೆ ಹೇಗೆ ಗೊತ್ತು? ಇವನು ನನ್ನನ್ನೆಲ್ಲಿಗೆ ಕರೆದುಕೊಂಡು ಹೋಗುವನು ಎಂಬ ವಿಚಾರದಲ್ಲಿ ಪದೇ ಪದೇ ನಡೆದುದೆಲ್ಲವನ್ನು ನೆನೆಸಿಕೊಳ್ಳುತ್ತಿರುವಾಗ ಈಗ ನಾವೆಲ್ಲಿರುವದು ಎಂದು ಸವಾರನನ್ನು ಕೇಳಿದರು. ಸವಾರ ಮಂಗಸೂಳಿವರೆಗೆ ಬಂದಿದ್ದೇವೆ ಎಂದು ಹೇಳಿದನು. ಆಗ ಸೂರ್ಯೋದಯದ ಲಕ್ಷಣಗಳೂ ಕಂಡು ಬಂದವು. ಇನ್ನೇನು ಬೆಳಗಾಗುತ್ತಲಿರುವದು. ಮುಂದೇನು ಮಾಡಬೇಕೆಂದು ಯೋಜನೆಯಲ್ಲಿ ಮಗ್ನನಾಗಿ ಕುದುರೆ ಸವಾರನು ಹಿಂದಿರುಗಿ ನೋಡಬೇಡವೆಂದು ಹೇಳಿದುದನ್ನು ಮರೆತು ಹಿಂದೆ ನೋಡುತ್ತಾರೆ.

ಕ್ಷಣಾರ್ಧದಲ್ಲಿ ದೇಸಾಯರು ಕೆಳಗೆ ಬಿದ್ದರು. ಸಾವರಿಸಿಕೊಳ್ಳುತ್ತಿರುವಾಗಲೇ ಕುದುರೆಯೂ ಕುದುರೆ ಸವಾರನೂ ಕಾಣದಾದರು.

ದೇಸಾಯರು ಇನ್ನೂ ಗಡಬಡಿಸಿ ಸುತ್ತಲೆಲ್ಲ ನೋಡಿದರು. ಯಾರು ಕಾಣಲಿಲ್ಲ. ಆಗ ಅವರು ಅತೀ ದು:ಖಿತರಾಗಿ, ತನ್ನನ್ನು ಕರೆ ತಂದವರು ಯಾರೂ ಅಲ್ಲ ಶ್ರೀ ಮಲ್ಲಯ್ಯನೇ! ಅಯ್ಯೋ ಮಲ್ಲಯ್ಯನೊಡನಿದ್ದೂ ಮಲ್ಲಯ್ಯನನ್ನು ಕಾಣದೆ ಹೋದೆ. ಹೇ ದೈವವೇ ಏನಿದು? ನನಗೆ ನಿನ್ನ ಕೃಪೆಯಿಲ್ಲದೆ ಬಂಧನ ಮುಕ್ತತೆ ಯಾತಕ್ಕಾಗಿ ಎಂದು ಪರಿಪರಿಯಾಗಿ ದು:ಖಿಸುತ್ತಿದ್ದಾಗ ಪುನ: ಮನಸ್ಸಿನಲ್ಲಿ ದೇವರ ಕಾಣುವ ಬಯಕೆ ಬಲವಂತಪಡಿಸಿದಾಗ 'ನಾನು ನಿನ್ನ ಪಕ್ಕದ ಗಿಡದ ಹತ್ತಿರವೇ ಇದ್ದೇನೆ. ಅರಿಷಿಣ - ಕುಂಕುಮ ಕಾಣುವ ಲಿಂಗ ರೂಪದ ಸ್ಥಳವೇ ನನ್ನ ತಾಣ ' ಹೀಗೆ ಕಿವಿಯಲ್ಲಿ ಯಾರೋ ಹೇಳಿದಂತಾಯಿತು. ಪೂರ್ಣ ಪ್ರಜ್ಞೆಯಿಂದ ದು:ಖವನ್ನು ಬದಿಗಿರಿಸಿ ಅಕ್ಕ ಪಕ್ಕದಲ್ಲಿ ನೋಡಿದಾಗ, ಲಿಂಗ ರೂಪದ ಶಿವನ ಸಾಕ್ಷಾತ್ಕಾರವಾಯಿತು. ದೇಸಾಯರ ಭಕ್ತಿ ಇಮ್ಮಡಿಗೊಂಡಿತು. ಅಲ್ಲಿಯೇ ಗುಡಿಯೊಂದನ್ನು ಕಟ್ಟಲೂ ನಿರ್ಧರಿಸಿ ಕಟ್ಟಿಸಿದರು. ಅವರು ಕಟ್ಟಿಸಿದ ಗುಡಿಯೇ ಇಂದಿನ ದೇವಾಲಯವೆಂದೂ ಬಲ್ಲವರು ಹೇಳುತ್ತಾರೆ. ಸ್ವಯಂಭೂಲಿಂಗ ಇದಾದುದರಿಂದ ಅದು ಇಂದಿನವರೆಗೂ ಕ್ಷೇತ್ರವಾಗಿದೆ.

ಶ್ರೀ ಮಲ್ಲಯ್ಯನ ಚರಿತ್ರೆ

ಅನೇಕ ವರುಷಗಳ ಹಿಂದೆ ಭಾರತದಲ್ಲಿ ಇಂದಿರುವ ಪರ್ವತಗಳಲ್ಲಿ 'ಮಣಿಚೂಲ' ವೆಂಬ ಸುಂದರ ಪರ್ವತವಿತ್ತು. ಈ ಪರ್ವತ ಶಾಂತಿ



ಸ್ವರೂಪಿಣಿಯಾಗಿದ್ದಿತಲ್ಲದೆ. ಅನೇಕ ಜೀವಿಗಳ, ಗಿಡ-ಮರಗಳ, ಪಶು-ಪಕ್ಷಿಗಳ ಆಶ್ರಯ ತಾಣವಾಗಿತ್ತು. ಜಪ-ತಪ ಮಾಡುವವರ ನೆಲೆಯಾಗಿತ್ತು. ಮುನಿಗಳು,

ಋಷಿಗಳು ಅಲ್ಲಿ ತಮ್ಮ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಅವರಲ್ಲಿ ಮುಖ್ಯವಾಗಿ ಧರ್ಮಪುತ್ರರೆಂದು ಹೆಸರುವಾಸಿಯಾದ ಏಳು ಜನ ಮುನಿ ಶ್ರೇಷ್ಠರೂ ತಮ್ಮ ಕುಟುಂಬ ಸಹಿತ ವಾಸವಾಗಿ ತಮ್ಮ ಜಪ-ತಪಗಳನ್ನು ಮಾಡುತ್ತಿದ್ದರು. ಮಣಿಚೂಲ ಪರ್ವತವೂ ಕೂಡ ಈ ಮುನಿ ಶ್ರೇಷ್ಠರಿಗೆ ಅವರ ಕಾರ್ಯದಲ್ಲಿ ಸಹಕರಿಸಿ, ತನ್ನ ಸೌಂದರ್ಯದಿಂದ, ಸಂಪತ್ತಿನಿಂದ ತನ್ನಲ್ಲಿ ವಾಸವಾಗಿದ್ದವರಿಗೆಲ್ಲ ಅವರವರ ಕಾರ್ಯದಲ್ಲಿ ಉತ್ತೇಜಿಸುವಂತಿದ್ದಿತು.

ಮಣಿ-ಮಲ್ಲನೆಂಬ ಮಹಾ ಬಲಾಢ್ಯರೂ, ಶೂರರೂ, ವೀರರೂ ಆದ ದೈತ್ಯರು ತಮ್ಮ ಅಂಗುಷ್ಠದ ಮೇಲೆ ಘೋರ ದೀರ್ಘ ತಪಸ್ಸನ್ನಾಚರಿಸಿ ಬ್ರಹ್ಮ ದೇವನಿಂದ ತಾವು ಇಚ್ಛಾ ಮರಣ ಮಾತ್ರವೆಂಬ ವರವನ್ನೂ ಪಡೆದವರಾಗಿದ್ದರು. ಅಜಾನು ಬಾಹುಗಳೂ, ಭೀಭತ್ಸರೂ, ಅಕರಾಳ-ವಿಕರಾಳ ರೂಪ ದೇಹವುಳ್ಳವರೂ, ಅಸಹ್ಯ ರೂಪಿಗಳೂ ಆದ ಇವರನ್ನು ಕಂಡ ಮಾತ್ರಕ್ಕೇ ಭೂಲೋಕದವರು ಹೆದರಿಕೆಯಿಂದಲೇ ಸಾಯುವಂತೆ ಆಕಾರ ಹೊಂದಿದವರೂ ಆಗಿದ್ದರು. ಈ ದೈತ್ಯರು ಭೂಲೋಕದ ಎಲ್ಲ ಪರ್ವತಗಳಲ್ಲಿ ಸುತ್ತಾಡುತ್ತ ಈ ಮಣಿಚೂಲ ಪರ್ವತಕ್ಕೆ ಬಂದರು. ಇಲ್ಲಿಯ ಪ್ರಕೃತಿ ಸೌಂದರ್ಯ, ಶಾಂತಿಗೆ ಮರುಳಾಗಿ ಪರ್ವತದಲ್ಲೆಲ್ಲ ಸುತ್ತಾಡ ತೊಡಗಿದಾಗ, ಅವರಿಗೆ ಅಲ್ಲಲ್ಲಿ ವಾಸವಾಗಿದ್ದ ಋಷಿ-ಮುನಿಗಳ ಆಶ್ರಮಗಳೂ, ಅವುಗಳಲ್ಲಿ ವಾಸಿಸುವ ಅನೇಕ ಜೀವರಾಶಿಗಳು ಅವರಿಗೆ ಮಕ್ಕಳ ಆಟದ ವಸ್ತುಗಳಂತೆ ಕಂಡು ಅವರೊಂದಿಗೆ ಚಿನ್ನಾಟವಾಡತೊಡಗಿದ್ದ ಅವರು 'ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ' ಎಂಬ ನಾಣ್ಣುಡಿಗೆ ಕಾರಣಭೂತರಂತೆ ವರ್ತಿಸುತ್ತಿದ್ದರು. ಅವರ ಈ ವರ್ತನೆ ಪರ್ವತದಲ್ಲಿ ವಾಸಿಸುತ್ತಿದ್ದ

ಜೀವಿಗಳಿಗೆಲ್ಲ ಕಂಟಕಪ್ರಾಯವಾಗಿತ್ತು. ಋಷಿ ಮುನಿಗಳಂತೂ ಇವರಿಂದ ಬಹಳಷ್ಟು ಪೀಡಿತರಾಗಹತ್ತಿದರು. ಈ ದೈತ್ಯರ ವೃತ್ತಾಂತವನ್ನು ಬಲ್ಲ ಋಷಿ ಶ್ರೇಷ್ಠರೂ ಕೂಡ ಇವರ ಉಪಟಳಕ್ಕೆ ಬೇಸತ್ತಿದ್ದರೂ. ತಾವು ಅವರಿಗೆ ಏನೂ ಮಾಡಲಾರದವರಾಗಿ, ಹತಾಶರಾಗಿ ದೇವಲೋಕದ ಮೊರೆ ಹೊಕ್ಕರು. ಈ ಮುನಿಶ್ರೇಷ್ಠರು ತಮ್ಮ ತಪೋಬಲದಿಂದ ದೇವಲೋಕದಲ್ಲಿ ಇಂದ್ರನನ್ನು ಕಂಡು ಈ ರಾಕ್ಷಸ (ದೈತ್ಯ) ರಿಂದ ತಮಗೂ ತಮ್ಮ ಪರ್ವತಕ್ಕೂ ಆಗುತ್ತಿರುವ ಸಕಲ ರೀತಿಯ ಹಿಂಸೆಗಳನ್ನು ವಿವರಿಸಿ, ತಮಗೆ ರಕ್ಷಣೆ ನೀಡಬೇಕೆಂದು ಕೇಳಿಕೊಂಡರು. ರಾಕ್ಷಸರ ಪೂರ್ವ ವೃತ್ತಾಂತವನ್ನರಿತ ಇಂದ್ರನು, ಈ ಕೆಲಸಕ್ಕೆ ತಾನು ಅಸಮರ್ಥನಾದ್ದರಿಂದ ಅವರ ರಕ್ಷಣೆಗಾಗಿ ವಿಷ್ಣುವಿನ ಕಡೆಗೆ ಅವರನ್ನು ಕರೆದುಕೊಂಡು ಹೋದನು. ವಿಷ್ಣು ಕೂಡ ಇದು ತನ್ನಿಂದಾಗುವ ಕೆಲಸವಲ್ಲವೆಂದು ಇಂದ್ರ ಸಹಿತ ಋಷಿಗಳನ್ನು ಕರೆದುಕೊಂಡು ಶಿವನ ಕಡೆಗೆ ಹೋದನು.

ಶಿವನು ಋಷಿಗಳಾದಿಯಾಗಿ ದೇವತೆಗಳಿಂದಲೂ ಆ ದೈತ್ಯರ ಉಪಟಳವನ್ನು ವಿವರವಾಗಿ ತಿಳಿಯುತ್ತಿರುವಂತೆಯೇ ಶಿವನ ಸಹನೆಯೂ ಮೀರಿತು. ಬಹಳಷ್ಟು ಸಿಟ್ಟಿನಿಂದ ಆ ರಾಕ್ಷಸರ ವಧೆಗಾಗಿ ತನ್ನ ಜಡೆಯನ್ನು ಝಾಡಿಸಿದಾಗ ಭಯಾನಕ ರೂಪದ ಬಲಿಷ್ಠ ದೇವಿಯೊಬ್ಬಳು ಪ್ರತ್ಯಕ್ಷಳಾಗಿ ತಾನು ಮಾಡಬೇಕಾದ ಕಾರ್ಯದ ವಿವರ ಕೇಳಿದಳು. ಅವಳ ರೂಪವನ್ನು ಕಂಡ ಋಷಿ ವರ್ಗ ಹೆದರ ಹತ್ತಿದರು. ಆಗ ಶಿವನು ಅವಳಿಗೆ ತುಪ್ಪದಿಂದ ಅಭಿಷೇಕ ಮಾಡಲು ಋಷಿ ವರ್ಗಕ್ಕೆ ತಿಳಿಸಿದನು. ಅವರು ಆ ದೇವಿಗೆ ತುಪ್ಪದಿಂದ ಅಭಿಷೇಕ ಮಾಡಲು ಅವಳಿಗೆ 'ಘೃತಮಾರಿ' ಎಂಬುದಾಗಿ ಹೆಸರು ಬಂದಿತು. ಈ ಘೃತಮಾರಿಗೆ ದೇವಲೋಕದವರು ಮಾಡಲಿರುವ ದೇವ-ದಾನವರ ಯುದ್ಧದಲ್ಲಿ ತನ್ನೆಲ್ಲ ಪರಾಕ್ರಮ ತೋರಿಸುವಂತೆ

ಆಜ್ಞಾಪಿಸಿದನು. ಘೃತಮಾರಿಯು ತನ್ನ ಎಲ್ಲ ಬಲವನ್ನು ಪ್ರಯೋಗಿಸಿದರೂ ಈ ದೈತ್ಯರ ವಧೆ ಮಾಡಲಾಗಲಿಲ್ಲ. ಇದನ್ನರಿತು ಶಿವನು ಇತರ ದೇವಗಣಗಳೂ




ತಮ್ಮ ಸೈನ್ಯದೊಂದಿಗೆ ಯುದ್ಧಕ್ಕೆ ಸಿದ್ಧರಾಗಲು ತಿಳಿಸಿ, ಸೇನಾಧಿಕಾರಿಗಳಾಗಿ ನಂದಿಯೂ, ಷಣ್ಮುಖನೂ, ಗಣಪತಿಯೂ, ಕಾರ್ತಿಕನೂ ನೇಮಕಗೊಂಡರು. ಶಿವನೂ ಕೂಡ ಭೈರವನ ರೂಪದಲ್ಲಿ, ಪಾರ್ವತಿಯು ಆದಿಶಕ್ತಿಯ ರೂಪದಲ್ಲಿ,

ವಿಷ್ಣುವು ಹೆಗ್ಗಡೆಯಾಗಿ ಯುದ್ಧಕ್ಕೆ ಸನ್ನದ್ಧರಾದರು. ಹೀಗೆ ಸನ್ನದ್ಧರಾದ ಒಟ್ಟು ದೇವಲೋಕದ ಸೈನ್ಯ ಏಳುಕೋಟಿಯಾಯಿತು. ಈ ಏಳುಕೋಟಿಯ ನೇತೃತ್ವ ವಹಿಸಿದ್ದರಿಂದ ಶಿವನಿಗೆ '' ಏಳು ಕೋಟಿ '' ಎಂಬ ಹೆಸರೂ ಪ್ರಾಪ್ತವಾಯಿತು.

ದೇವಲೋಕದಿಂದ ಯುದ್ಧದ ವ್ಯವಸ್ಥೆ ಅರಿತ ದೈತ್ಯರೂ ಕೂಡ ತಮ್ಮ ಅನುಯಾಯಿಗಳೊಂದಿಗೆ ಯುದ್ಧಕ್ಕೆ ಸನ್ನದ್ಧರಾದರು. ಯುದ್ಧ ಪ್ರಾರಂಭವಾಯಿತು. ದೀರ್ಘ ಕಾಲದವರೆಗೂ ನಡೆಯಿತು. ಘೃತಮಾರಿಯು ಹಾಗೂ ಇತರ ದೇವಗಣಗಳು ದೈತ್ಯ ಸೈನ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡಿದರೂ, ಮಣಿ-ಮಲ್ಲರು ತಮ್ಮ ಅಪಾರ ಬಲದಿಂದ ಕಾದುತ್ತಲೇ ಇದ್ದರು. ಭೈರವ ರೂಪಿಯಾದ ಶಿವನಿಗೂ, ಆದಿಶಕ್ತಿಯಾದ ಪಾರ್ವತಿಗೂ ಇನ್ನು ತಡೆಯುವದು ಸಾಕೆನಿಸಿ ತಾವೇ ಯುದ್ಧರಂಗದಲ್ಲಿ ಪ್ರತ್ಯಕ್ಷ ಬಾಗವಹಿಸಿದಾಗ ಮಲ್ಲನು ಅವರ ದಾಳಿಯನ್ನು ತಾಳಲಾರದೆ ನೆಲಕ್ಕುರುಳಿದನು. ಶಿವನು ಅವನನ್ನು ಪಾತಾಳಕ್ಕೆ ತುಳಿಯಲು ಅವನ ತಲೆ ಮೇಲೆ ತನ್ನ ಪಾದವಿರಿಸಿದಾಗ, ಮಲ್ಲನಿಗೆ ಶಿವನ ಸ್ಪರ್ಶದಿಂದ ಜ್ಞಾನೋದಯವಾಗಿ ತನ್ನನ್ನು ಕ್ಷಮಿಸಲು ಪರಿಪರಿಯಾಗಿ ಬೇಡಿಕೊಂಡನು. ಕರುಣಾಮಯಿಯಾದ ಶಿವನು ಮಲ್ಲನಿಗೆ ನಿನ್ನ ಕೋರಿಕೆ ಏನೆಂದು ಕೇಳಿದಾಗ, ಸದಾಕಾಲ ನಿನ್ನ ಪಾದ ನನ್ನ ಮೇಲಿರುವಂತೆ ನನ್ನನ್ನು ನಿನ್ನ ಒಬ್ಬ ವಾಹನವನ್ನಾಗಿ ಸ್ವೀಕರಿಸಬೇಕೆಂದು ಬೇಡಿಕೊಂಡನು. ಶಿವನು ಇದಕ್ಕೆ ಒಪ್ಪಿ ಅವನಿಗೆ ಕುದುರೆ ರೂಪಕೊಟ್ಟು ಸಂತೈಸಿದನು.

ಮಲ್ಲನ ಮರಣದ ಸುದ್ದಿ ಮಣಿಗೆ ಇನ್ನೂ ತಿಳಿಯದಿರುವಾಗ ಶಿವನು

ತಾತ್ಕಾಲಿಕ ಯುದ್ಧ ವಿರಾಮ ಘೋಷಿಸಿ ಹೆಗ್ಗಡೆ ಪಾತ್ರ ವಹಿಸುತ್ತಿರುವ ವಿಷ್ಣುವನ್ನು ಮಣಿ ದೈತ್ಯನ ಕಡೆಗೆ ಕಳಿಸಿ ಯುದ್ಧದ ಅಪಾರ ಹಾನಿಯ ಬಗ್ಗೆ ತಿಳಿ ಹೇಳಲು



ತಿಳಿಸಿದನು. ಮಣಿಯು ವಿಷ್ಣುವನ್ನು ಆಲಿಸುತ್ತಿದ್ದಾಗ ಅವನ ತಮ್ಮ ಮಲ್ಲನ ವಧೆಯಾದುದು ತಿಳಿಯಿತು. ಇದರಿಂದ ಮತ್ತಷ್ಟು ಕೋಪಗೊಂಡ ಮಣಿಯು ''ಹೇಡಿ ದೇವತೆಗಳೇ, ನನ್ನ ತಮ್ಮನನ್ನು ಹೇಗೋ ಏನೋ ಮಾಡಿ ವಧಿಸಿ, ನಿಮ್ಮ ಅಸಹಾಯಕತೆಯನ್ನು ಬಚ್ಚಿಟ್ಟು ಯುದ್ದದ ಬಗ್ಗೆ ನನಗೆ ತಿಳಿ ಹೇಳಲು

ಇಚ್ಚಿಸಿರುವೀರಾ? ನಿಮ್ಮಲ್ಲಿ ನನ್ನನ್ನೂ ವಧಿಸುವ ಶಕ್ತಿ ಇಲ್ಲವೆಂದು ಹೇಳಿರಿ. ನನ್ನನ್ನು ವಧಿಸುವ ಶಕ್ತಿ ಇದ್ದರೆ ಈ ತರದ ಮಾತು ಏಕೆ? ಧೈರ್ಯವಿದ್ದರೆ ಯುದ್ಧ ಮಾಡಿ ನನ್ನನ್ನು ಗೆಲ್ಲಿರಿ ಎಂದು ಪ್ರತಿವಾದ ಮಾಡಿ ಕಳಿಸಿದನು.

ಮತ್ತೆ ಯುದ್ಧ ಪ್ರಾರಂಭವಾಗಿ ಮಣಿ ದೈತ್ಯನ ಅಪಾರ ಸೈನ್ಯ ನಾಶವಾಯಿತು. ಮಣಿಯು ಶಿವನೊಡನೆ ನೇರವಾಗಿ ಯುದ್ಧಕ್ಕೆ ಬರಲು ಶಿವನು ತನ್ನ ಆಯುಧ ಪ್ರಯೋಗಿಸಲು ಈ ರಕ್ಕಸನೂ ನೆಲಕ್ಕುರುಳಿದನು. ಆಗ ಶಿವನು ಇವನನ್ನೂ ಪಾತಾಳಕ್ಕೆ ತುಳಿಯಲಿಚ್ಚಿಸಿ ಅವನ ತಲೆಯ ಮೇಲೆ ಕಾಲಿಡಲು ಶಿವನ ಸ್ಪರ್ಶದಿಂದ ಅವನಿಗೂ ಜ್ಞಾನೋದಯವಾಗಿ ತನ್ನನ್ನು ಕ್ಷಮಿಸಬೇಕೆಂದೂ, ತಮ್ಮ ಪಾದ ಸ್ಪರ್ಶಕದಿಂದ ಪುನೀತನಾಗಿದ್ದಾಗಿಯೂ ಪರಿಪರಿಯಾಗಿ ಬೇಡಿಕೊಂಡನು. ಶಿವ ಇವನನ್ನೂ ಮನ್ನಿಸಿ ನಿನಗೇನಾಗಬೇಕೆಂದು ಕೇಳಲು, 'ನಿನ್ನ ಭಕ್ತರು ನಿನ್ನಿಂದ ಪುನೀತನಾದ ನನ್ನನ್ನೂ ನೆನೆಯುವಂತಾಗಬೇಕೆಂದು ಕೇಳಿಕೊಂಡನು'. ವರ ಕೊಡುವದರಲ್ಲಿ ಕೊಡುಗೈ ದೊರೆಯಾದ ಶಿವನು ಅವನ ಬೇಡಿಕೆಗೂ ಒಪ್ಪಿದ. ಶಿವನು, ಮೊದಲು ಭಕ್ತರು ನಿನ್ನ ಹೆಸರನ್ನೂ ನಂತರ ನನ್ನ ಹೆಸರನ್ನು ಸೇರಿಸಿ ಹೇಳುವಂತೆ 'ಮಲ್ಹಾರಿ ' ಎಂದೂ 'ಮಲ್ಲಯ್ಯ' ನೆಂದೂ ಹೇಳಲಿ ಎಂದು ಹೇಳಿ ಮಣಿಯನ್ನು ತುಳಿದನು.


ಮಣಿ-ಮಲ್ಲರಿಗೆ ಐದು ಜನ ಮಕ್ಕಳಿದ್ದರು. ತಮ್ಮ ಪೂರ್ವಜರ ಸ್ಥಿತಿ ಅರಿತೂ ಅವರು ಯುದ್ಧ ಬಯಸಿ ಬಂದು ನಿಲ್ಲಲು ಶಿವನು ಅಜ್ಞಾನಿಗಳಾದ ಅವರನ್ನು ಕಲ್ಲಾಗುವಂತೆ ಶಾಪವಿತ್ತರು. ಅವರೆಲ್ಲ ದೊಡ್ಡ ಗುಡ್ಡಗಳಾಗಿ ಬಿದ್ದರು.

ಇದನ್ನೆಲ್ಲ ನೋಡುತ್ತಿದ್ದ ಋಷಿ ವೃಂದದವರು ಬಹಳ ಸಂತೋಷಪಟ್ಟು ಮಲ್ಹಾರಿಗೆ / ಮಲ್ಲಯ್ಯನಿಗೆ ವಂದಿಸಿದಾಗ ದೇವನು ಅವರನ್ನು ಅವರ ವಾಸ ಸ್ಥಾನಕ್ಕೆ ಕಳಿಸಲು ವ್ಯವಸ್ಥೆ ಮಾಡಿದನು. ಆದರೆ ಋಷಿ ವೃಂದದವರು ಹೊರಡಲು ಆತುರ ತೋರದ್ದರಿಂದ, ಅವರ ಮನಸ್ಸಿನಲ್ಲಿ ಇನ್ನೂ ಏನೋ ಇರುವದಾಗಿ ಭಾವಿಸಿ ಅವರನ್ನು ವಿಚಾರಿಸಲು ಋಷಿವೃಂದ 'ಹೇ' ದೇವಾ ನಮ್ಮ ಕುಲಕೋಟಿಗಳನ್ನು

ರಕ್ಷಿಸಿದ ನಿನ್ನನ್ನು ನಾವು ದಿನಾಲು ಕಾಣುವಂತೆ ಏನಾದರೂ ಮಾಡು ಎಂದು ಬೇಡಿಕೊಂಡರು. ಆಗ ಶಿವನು 'ಲಿಂಗರೂಪದಲ್ಲಿ ಭೂಲೋಕದಲ್ಲಿ ಸದಾಕಾಲ ನನ್ನನ್ನು ಕಾಣಬಹುದು' ಎಂದು ಹೇಳಿ ಭೂಲೋಕದವರನ್ನೆಲ್ಲ ಬೀಳ್ಕೊಟ್ಟನು.

ಹೀಗೆ ಮಂಗಸೂಳಿಯಲ್ಲಿಯ ಮಲ್ಲಯ್ಯನ ಸ್ಥಾನವು ಪವಿತ್ರ ಸ್ಥಾನವಾಗಿ ಅಲ್ಲಿ ಮಲ್ಲಯ್ಯನನ್ನು ಪೂಜಿಸುವವರಿಗೆ ಸಕಲ ಸಂಮೃದ್ಧಿಯನ್ನೀಯುವ ಕ್ಷೇತ್ರವಾಯಿತು.

ಮಂಗಸೂಳಿಯು ಇಂದಿಗೂ ಕೂಡ ಒಂದು ಪವಿತ್ರ ಕ್ಷೇತ್ರವಾಗಿದ್ದು ಹಿಂದು-ಮುಸ್ಲಿಮರ ಐಕ್ಯತೆಯ ತಾಣವಾಗಿ ಎರಡೂ ಧರ್ಮದವರು ಯಾವ ಭೇದ-ಭಾವವಿಲ್ಲದೆ ಈ ಕ್ಷೇತ್ರಕ್ಕೆ ಬರುತ್ತಲೇ ಇರುವದನ್ನು ಕಾಣಬಹುದು.



॥ ಓಂ ನಮ: ಶಿವಾಯ ॥

'ಮಲ್ಲಯ್ಯ ಉಘೆ' 'ಏಳುಕೋಟಿ ಉಘೆ' 'ಮಲ್ಹಾರಿ ಉಘೆ'

॥ ಶ್ರೀ ಖಂಡೋಬಾ ಮಹಾರಾಜ ಕೀ ಜೈ ॥

ಇವುಗಳು ಹಿಂದುಗಳ ಜಯ ಜಯಕಾರವಾಗಿದ್ದು

॥ ಮಲ್ಲುಖಾನ ಮಹಾರಾಜ ಕೀ ಜೈ ॥

॥ ಮಾಯಿಬಾಪ ಮಲ್ಲುಖಾನ ಕೀ ಜೈ ॥

ಇವು ಮುಸ್ಲಿಮರ ಜಯ ಜಯಕಾರವಾಗಿವೆ.

ಆರತಿ

(ಮೂಲ: ಮರಾಠಿಯಿಂದ)

ಪಂಚಾನನ ಹಯವಾಹನ ಸುರಭೊಷಿತ ನೀಲಾ।
ಖಂಡಾಮಂಡಿತ ದಂಡಿತ ದಾನವ ಅವಲೀಲಾ॥
ಮಣಿ-ಮಲ್ಲ ಮರ್ದುನಿ ಜೋಧೊ ಸರ ಪಿವಳಾ।
ಹಿರೇಕಂಕಣ ಬಾಸಿಂಗೆ ಸುಮನಾ ಚಾ ಮಾಲಾ॥
ಜಯದೇವ ಜಯದೇವ ಜಯಶಿವ ಮಲ್ಹಾರಿ।
ವಾರೀ ಪೂರ್ಜನವಾರೀ ಭವ ದುಸ್ತರ ತಾಪಹರಿ॥
ಸುರವರ ಸಂವರ ವರದೇ ಮಜಲಾನಿ ದೇವಾ।
ನಾನಾ ನಾಮೇ ಗಾಯಿನ ಹೀ ತುಮಚೀ ಸೇವಾ॥
ಅಘಟಿತ ಗುಣಾ ಗಾವಯಾ ವಾಟತಸೇ ಹೇವಾ।
ಫಣಿಹರ ಶಿಣಲಾ ಕಿತೀ ನರ ಪಾಮರ ಕೇವಾ॥
ಜಯದೇವ ಜಯದೇವ ಜಯಶಿವ ಮಲ್ಹಾರಿ।
ವಾರೀ ಪೂರ್ಜನವಾರೀ ಭವ ದುಸ್ತರ ತಾಪಹರಿ॥
ರಘುವೀರ ಸ್ಮರಣೀ ಶಂಕರ ಹೃದಯಿ ನೀವಾಲಾ।
ತೋಹಾ ಮಲ್ಲಾಂತರ ಅವತಾರ ಝಾಲಾ॥
ಯಾ ಲಾಗೀ ಅವಡೀ ಭಾವೆ ವರ್ಣಿಲಾ।
ರಾಮಿ ರಾಮದಾಸಾ ಜೀವಲಗ ಭೇಟಲಾ॥
ಜಯದೇವ ಜಯದೇವ ಜಯಶಿವ ಮಲ್ಹಾರಿ।
ವಾರೀ ಪೂರ್ಜನವಾರೀ ಭವ ದುಸ್ತರ ತಾಪಹರಿ॥

: ಯಾತ್ರಿಕರಿಗಾಗಿ :

ಮಂಗಸೂಳಿ ಗ್ರಾಮದಿಂದ ಸುಮಾರು ಅರ್ಧ ಮೈಲಿನ ಅಂತರದಲ್ಲಿ ಮಲ್ಲಯ್ಯ, ಮಾರ್ಕಂಡೇಯ, ಖಂಡೋಬಾ ಎಂದು ಕರೆಯಲಾಗುತ್ತಿರುವ ದೇವಸ್ಥಾನವಿದೆ. ಇದು ಕಾಗವಾಡ ಅಥಣಿ ಹೆದ್ದಾರಿಯಲ್ಲಿದ್ದು ಕ್ಷೇತ್ರಕ್ಕೆ ಹೋಗಿ ಬರಲು ಸಾಕಷ್ಟು ಬಸ್‌ಗಳು ಸಿಗುತ್ತವೆ. ಮಿರಜ ಮತ್ತು ಅಥಣಿ ಊರುಗಳಿಂದ ಸುಮಾರು 15 ಕಿ.ಮಿ. ಅಂತರದಲ್ಲಿದೆ.

ಚೈತ್ರ ಶುದ್ಧ ದಶಮಿಯು ಜಾತ್ರೆಯ ದಿನವಾಗಿದೆ. ಪಲ್ಲಕ್ಕಿ ಉತ್ಸವ ಮಧ್ಯರಾತ್ರಿ ಪ್ರಾರಂಭವಾಗಿ ಬೆಳಗಿನ ವರೆಗೂ ನಡೆಯುವದು. ಅದರಲ್ಲಿ ಸರಪಳಿ ಹರಿಯುವ ಕಾರ್ಯಕ್ರಮವೂ ಇರುವದು. ಜೊತೆಗೆ ಆಶ್ವೀಜ ಶುದ್ಧ ಪ್ರತಿಪದೆಯಿಂದ ವಿಶೇಷ ಪೂಜೆಗಳು ನಡೆದು ದಶಮಿಯ ದಿನದಂದೂ ಪೂಜೆ ನಡೆದು ಸರಪಳಿ ಹರಿಯುವ ಕಾರ್ಯ ನಡೆಯುವದು. ಇವುಗಳಲ್ಲದೆ ಮಾರ್ಗಶಿರ ಮಾಸದಲ್ಲಿ ಶುದ್ಧ ಪ್ರತಿಪದೆಯಿಂದ ಷಷ್ಠಿವರೆಗೆ ಮತ್ತು ಮಾಘ ಶುದ್ಧ ಹುಣ್ಣಿಮೆಯಂದೂ ಉತ್ಸವ ನಡೆಯುವವು.

ಯಾತ್ರಿಕರಿಗೆ ತಂಗಲು ಪೌಳಿಗಳು ಲಭ್ಯವಿರುತ್ತವೆ. ದೇವಾಲಯದಲ್ಲಿ ನೀರು, ವಿದ್ಯುತ್ತಿನ ಸಾಕಷ್ಟು ವ್ಯವಸ್ಥೆ ಇದೆ. ದೇವಸ್ಥಾನದ ಪೂಜಾರಿಗಳಿಗೆ ಮುಂಚಿತವಾಗಿ ತಿಳಿಸಿದಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದದ ವ್ಯವಸ್ಥೆ ಇದೆ. ದೇವಾಲಯದ ಒಳ ಹೊರಗೆ ಗಿಡ ಮರಗಳಿದ್ದು, ವಾತಾವರಣವು ಅಲ್ಹಾದಕರವಾಗಿರುತ್ತದೆ.

ಕರ್ನಾಟಕದಲ್ಲಿ ಹೀಗೆ ಮಲ್ಲಯ್ಯನ ಸ್ಪರ್ಶ ತಾಣಗಳಾದ ಧಾರವಾಡದ

ಸಮೀಪ [illegible]
ಜಿಲ್ಲೆಯಲ್ಲಿ [illegible] ತಾ
ಪವಿತ್ರ ಸ್ಥಾನಗಳಾಗಿವೆ.

" ಮಲ್ಲಯ್ಯ " " ಮಲ್ಲಾರಿ" "ಖಂಡೋಬಾ" "ಮೈಲಾರಿ" ಎಂಬ ಹೆಸರುಗಳಿಂದ ಪೂಜಿಸಲ್ಪಡುತ್ತಿರುವ ಅನೇಕ ದೇವಾಲಯಗಳನ್ನು ಅಲ್ಲಲ್ಲಿ ಕಾಣಬಹುದು.

ಶ್ರೀ ಮಂಗಸೂಳಿ ಮಲ್ಲಯ್ಯ ಕ್ಷೇತ್ರಕ್ಕೆ ದಿನ ನಿತ್ಯ ಮಹಾರಾಷ್ಟ್ರದಿಂದ ಬಸ್ಸಿನ ಸೌಕರ್ಯವಿದ್ದು ಭಕ್ತರಿಗೆ ಬರಲಿಕ್ಕೆ ಹೆಚ್ಚಿನ ಅವಕಾಶ ಮಾಡಿಕೊಟ್ಟರುವರು.

ಕೋಲ್ಲಾಪೂರ, ಮಿರಜ, ಸಾಂಗಲಿದಿಂದ ಪ್ರತಿ ನಿತ್ಯ 8 ಬಸ್ಸುಗಳು ಮಂಗಸೂಳಿ ಕ್ಷೇತ್ರಕ್ಕೆ ಬರುತ್ತವೆ. ಅದು ಅಲ್ಲದೆ ಇನ್ನುಳಿದ ಉರುಗಳಿಂದ ಬಸ್ಸಿನ ಸೌಕರ್ಯವಿರುತ್ತದೆ.

ದಸರಾ 10 ದಿವಸ ಬಹಳ ವಿಜೃಂಬಣೆಯಿಂದ ಉತ್ಸವವಿದ್ದು 10 ನೇಯ ದಿವಸ ಸಾಕಳಿ ಹರಿಯುತ್ತದೆ. ಮತ್ತು ಚೈತ್ರ ಶುದ್ಧ ದಶಮಿಯದಂದು ದೊಡ್ಡ ಜಾತ್ರೆ ಅದರಲ್ಲಿ ಲಕ್ಷೋಪ ಲಕ್ಷ ಜನರು ಬರುತ್ತಾರೆ. ಎಲ್ಲ ತರಹದ ವಿವಿದ ವಿನೋದಾವಳಿಗಳು ಮತ್ತು ಮನೋರಂಜನೆಯ ಆಟಗಳು ಅದಲ್ಲದೆ ದನಕರುಗಳನ್ನು ಮಾರುವದು ಇರುತ್ತದೆ. ಹೀಗಾಗಿ ಜಾತ್ರೆ ತುಂಬಾ ವಿಜೃಂಭಣೆಯಿಂದ ಆಗುವದು. ಪ್ರತಿ ರವಿವಾರ ಮತ್ತು ಅಮವಾಸ್ಯೆಗಳ ಅಸಂಖ್ಯಾತ ಭಕ್ತರ ದಿನಗಳು. ಶಿವರಾತ್ರಿ, ಉಗಾದಿ, ದಸರಾ ವಿಷೇಶ ದಿನಗಳಾಗಿವೆ. ಶ್ರಾವಣ ಕಾರ್ತಿಕ ಮಾಸಗಳಲ್ಲಿ ಮತ್ತು ಮಾರ್ಗಶಿರ ಚಂಪಾಶಿಷ್ಠಿಯಲ್ಲಿ ವಿಷೇಶ ಪೂಜಾ ದಿನಗಳ ದೊಡ್ಡ ಉತ್ಸವ ನಡೆಯುತ್ತದೆ.

॥ ಶ್ರೀ ಎಳಕೋಟ ಎಳಕೋಟ ಘೇ ಘೇ ಘೇ ॥

ಶ್ರೀ ಕ್ಷೇತ್ರ ಮಂಗಸೂಳಿ ಶ್ರೀ ಮಲ್ಲಯ್ಯ ದೇವ
ಚಿತ್ರಗಳು, ಮಹಾತ್ಮೆ ಪುಸ್ತಕಗಳು, ಉಂಗುರ,
ಲಾಕೆಟ್, ಕೀ ಚೈನ್, ಪ್ರಸಾದ ಪಾಕೀಟುಗಳು
ತೀರ್ಥ ಬಾಟಲಿಗಳು, ಭಂಡಾರ ಪಾಕೀಟುಗಳ
ಕಾಯಿ-ಕರ್ಪೂರ ಇತ್ಯಾದಿ ಪೂಜಾ
ಸಾಮಾನುಗಳು ಯೋಗ್ಯ ದರದಲ್ಲಿ ಸಿಗುವ ಸ್ಥ

ಮುದ್ರಕರು : ನ್ಯಾಷನಲ್ ಪ್ರಿಂಟರ್ಸ್,
ಹೊಸೂರ, ಹುಬ್ಬಳ್ಳಿ - 02
ಫೋನ : 374886

ಪ್ರಕಾಶಕರು : ಎಸ್.ಆರ್.ಎಂಟರ್‌ಪ್ರೈಜಿಸ್
ಹುಬ್ಬಳ್ಳಿ - 580 021.

ಬೆಲೆ : ನಾಲ್ಕು ರೂಪಾಯಿ ಮಾತ್ರ.